ಶ್ರೀ ಟಿ. ಎಂ. ಮಂಜುನಾಥ್.—ಕೋಕನಟ್ ತೆಂಗಿನ ಬೀಜವನ್ನು ಇರಾಖಿಯವರು ಸರಿಯಾದ ವ್ಯವಸ್ಥಿತ ರೀತಿಯಲ್ಲಿ ಆಯ್ಕೆಮಾಡಿ ಬರುತ್ತಾ, ಇಲ್ಲ ಎನ್ನುವುದು ಗಮನಕ್ಕೆ ಬಂದಿದೆಯೇ ? ಆ ವಿಚಾರ ಸರ್ಕಾರದ ಗಮನಕ್ಕೆ ತಂದರೆ, ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ತೆಂಗಿನ ಸಸಿಗಳನ್ನು ಹಂಚುವ ವಿಷಯದಲ್ಲಿ ತಪ್ಪು ಆಗಿದೆ ಎಂದು ಇನ್ನುವರೆಗೆ ಸರ್ಕಾರದ ಗಮನಕ್ಕೆ ಬಂದಿಲ್ಲ. ಬಂದರೆ, ತನಿಖೆ ನಡೆಸಿ ಯೋಗ್ಯವಾದ ಕ್ರಮಗಳನ್ನು ಕೂಡಲೇ ತೆಗೆದುಕೊಳ್ಳುತ್ತೇವೆ.

## Compulsory retirement of Government servants

138. Sri VIRUPAKSH M. GHADI (Haliyal).—

Will the Chief Minister be pleased to state :—

(*a*) whether confidential records are taken as the basis for a Government servant or a Talati, to discharge him on compulsory retirement ;

(*b*) if so, whether Government had found that in some cases the confidential records were found to be generally prejudicial ;

(*c*) whether under the Mysore Civil Services (Confidential Report) Rules, 1965 the adverse remarks, if any, are communicated to the Government servant concerned and a reasonable opportunity is given to him to answer the remarks ;

(*d*) whether Government has in such cases, a system of scrutinising such reports at Divisional or at the Government level under the said Rules before the issue of the Orders of compulsory retirement ;

(*e*) if not, the steps taken by Government to cancel the orders of compulsory retirement in deserving cases ?

Sri D. DEVARAJ URS (Chief Minister).—

(*a*) The Confidential Record of a Government servant is one of the factors taken into consideration in deciding whether he should be retired in the public interest.

(*b*) No.

(*c*) Yes, every Government servant to whom adverse remarks are communicated can, within six weeks from the date of receipt by him of ruch communication submit a representation against such remarks and a decision on the representation received is required to be taken within six weeks from the date of receipt of the representation.

(*d*) Screening Committees at the level of the Head of the department so far as Non-Gazetted Officers are concerned and at the level of the Secretary to Government concerned so far as Gazettad Officers are concerned, are constituted to consider whether a Govarnment servant

(SRI D. DEVARAJ URS)

should be retired in the public interest after completing 25 years of qualifying service or attaining the age of 50 years.

(e) Does not arise.

ಶ್ರೀ ವಿರೂಪಾಕ್ಷ ಎಂ. ಘಾಡಿ.—ಕೆಲವು ಸರ್ಕಾರಿ ನೌಕರರಮೇಲೆ ಅಡ್ವರ್ಸ್ ರಿಮಾರ್ಕ್ ; ಇಲ್ಲದಿದ್ದರೂ ಅವರನ್ನು ನಿವೃತಿಗೊಳಿಸಿರುವುದಕ್ಕೆ ಕಾರಣವೇನು ?

†ಶ್ರೀ ಡಿ. ದೇವರಾಜ ಅರಸ್.—ಯಾವುದಾದರು ಅಧಿಕಾರಿ ಮೇಲೆ ಅಡ್ವರ್ಸ್ ರಿಮಾರ್ಕ್ಸ್ ಇರುವುದು ಕಂಡುಬಂದರೆ ಅಂತಹ ಅಧಿಕಾರಿಯನ್ನು ನಿವೃತ್ತಿಗೊಳಿಸಲಾಗುತ್ತದೆ.

ಶ್ರೀ ವಿರೂಪಾಕ್ಷ ಎಂ. ಘಾಡಿ.—ಅಡ್ವರ್ಸ್ ರಿಮಾರ್ಕ್ಸ್ ಇಲ್ಲದಿದ್ದರೂ ಕೂಡ ಕೆಲವರನ್ನು ನಿವೃತ್ತಿ ಗೊಳಿಸಿರುವುದಕ್ಕೆ ಕಾರಣವೇನು ?

ಶ್ರೀ ಡಿ. ದೇವರಾಜ ಅರಸ್.—ಅದು ಊಹಾಪೋಹದ ಮಾತು.

ಶ್ರೀ ವಿರೂಪಾಕ್ಷ ಎಂ. ಘಾಡಿ.—ನನ್ನಲ್ಲಿ ಕಾಂಕ್ರೀಟ್ ಉದಾಹರಣೆ ಇದೆ.

ಶ್ರೀ ಡಿ. ದೇವರಾಜ ಅರಸ್.—ಇದ್ದರೆ ನೋಟೀಸ್ ಕೊಡಿ.

ಶ್ರೀ ಟಿ. ಎಂ. ಮಂಜುನಾಥ.—ಕೆಲವು ನೌಕರರು ನಿವೃತ್ತಿ ಹೊಂದಿದ ಮೇಲೆ ಮತ್ತೆ ಒಂದು ವರ್ಷ, ಎರಡು ವರ್ಷ ಎಕ್ಸ್‌ಟೆನ್‌ಷನ್ ಕೊಟ್ಟಿದ್ದೀರಿ. ಮತ್ತೇ ಕೆಲವರು ಎಕ್ಸ್‌ಟೆನ್‌ಷನ್ ಕೊಡಬೇಕೆಂದು ಕೇಳಿಕೊಂಡರೂ ಸಹ ಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಡಿ. ದೇವರಾಜ ಅರಸ್.—ನಾರ್ಮಲ್ ಆಗಿ ಸರ್ಕಾರೀ ನೌಕರರು ಯಾವ ತಾರೀಖಿಗೆ ನಿವೃತ್ತಿ ಹೊಂದಬೇಕೋ ಆ ತಾರೀಖಿಗೆ ನಿವೃತ್ತಿ ಹೊಂದುತ್ತಾರೆ. ವಿಶೇಷ ಸಂದರ್ಭದಲ್ಲಿ ಒಬ್ಬ ಸರ್ಕಾರೀ ನೌಕರರನ್ನು ಇನ್ನೂ ಕೆಲವು ವರ್ಷಗಳವರೆಗೆ ಉಪಯೋಗಿಸಿಕೊಳ್ಳುವುದು ಸೂಕ್ತವೆಂದು ಸರ್ಕಾರದ ಗಮನಕ್ಕೆ ಬಂದರೆ ಅಂತಹವರನ್ನು ಅಧಿಕಾರದಲ್ಲಿ ಮುಂದುವರಿಸುತ್ತೇವೆ. ಎಕ್ಸ್‌ಟೆನ್‌ಷನ್ ಕೊಡುವ ಬಗ್ಗೆ ಸರ್ಕಾರದ ಒಂದು ನೀತಿ ಏನಿದೆ ಎಂದರೆ, ಟೆಕ್ನಿಕರ್ ಸರ್ವಿಸಸ್ ನಲ್ಲಿರತಕ್ಕಂಥವರು ನಿವೃತ್ತಿಯಾದ ಕಾಲಕ್ಕೆ ಆ ಜಾಗಕ್ಕೆ ಬೇರೆಯವರು ದೊರೆಯುವುದಿಲ್ಲವೆಂದು ಕಂಡುಬಂದರೆ ಮತ್ತು ನಿವೃತ್ತಿ ಹೊಂದಿದವರು ವಿಶೇಷವಾದ ಅನುಭವ ಪಡೆದವರಾಗಿದ್ದರೆ ಅವರನ್ನು ಸ್ವಲ್ಪ ಕಾಲ ಸರ್ವಿಸ್‌ನಲ್ಲಿ ಮುಂದುವರಿಸುವುದು ಒಳ್ಳೆಯದೆಂದು ಸರ್ಕಾರದ ಡಿಸ್‌ಕ್ರಿಷನ್‌ನಲ್ಲಿ ಗೊತ್ತಾದರೆ ಅಂತಹವರಿಗೆ ಎಕ್ಸ್‌ಟೆನ್‌ಷನ್ ಕೊಡುತ್ತಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಇದೇ ವಿಚಾರದಲ್ಲಿ ಹಿಂಧಿನ ಸರ್ಕಾರ ಆಡಳಿತದಲ್ಲಿ ಇದ್ದಾಗ ಕೆಲವು ಸರಿಯಲ್ಲದ ನಡವಳಿಕೆಗಳು ನಡೆದಿವೆ. ಅಂತಹ ತಪ್ಪುಗಳನ್ನು ತಿದ್ದಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಈ ರೀತಿ ಜನರಲ್ ಆಗಿ ಪ್ರಶ್ನೆ ಕೇಳಿದರೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ಸ್ಪೆಸಿಫಿಕ್ ಉದಾಹರಣೆ ಕೊಟ್ಟು ಪ್ರಶ್ನೆ ಕೇಳಿದರೆ ಉತ್ತರ ಹೇಳುವುದಕ್ಕೆ ಸಹಾಯವಾಗುತ್ತದೆ.

ಶ್ರೀ ಎಸ್. ಎಂ. ಚಂದ್ರಶೇಖರ್.—ಸರ್ಕಾರೀ ನೌಕರರನ್ನು ನಿವೃತ್ತಿಗೊಳಿಸುವ ವಯೋಮಿತಿ ಎಲ್ಲ ಇಲಾಖೆಗಳ ನೌಕರರಿಗೂ ಒಂದೇ ರೀತಿ ಇದೆಯೇ ?

ಶ್ರೀ ಡಿ. ದೇವರಾಜ ಅರಸ್.—ಐ. ಎ. ಎಸ್. ಮತ್ತು ಐ. ಪಿ. ಎಸ್. ಅಧಿಕಾರಿಗಳಿಗೆ ನಿವೃತ್ತಿ ಗೊಳ್ಳುವ ವಯೋಮಿತಿ ಒಂದು ತರಹ ಇದೆ, ರಾಜ್ಯಸರ್ಕಾರದ ನೌಕರರಿಗೇ ಬೇರೆ ರೀತಿಯ ವಯೋಮಿತಿ ಇದೆ.

ಶ್ರೀ ಟಿ. ಎಂ. ಮಂಜುನಾಥ್.—ರೇಷ್ಮೆ ಇಲಾಖೆಯಲ್ಲಿ ಒಬ್ಬರು ಅಧಿಕಾರಿಗಳು ಇದ್ದಾರೆ. ಅವರಿಗೆ ತಾಂತ್ರಿಕ ಜ್ಞಾನ ಮತ್ತು ಉನ್ನತ ಅಭ್ಯಾಸದ ಅರ್ಹತೆ ಇದೆ. ಆದ್ದರಿಂದ ಅವರಿಗೆ ಎಕ್ಸ್‌ಟೆನ್‌ಷನ್ ಕೊಡುವ ಅವಶ್ಯಕತೆ ಕಂಡುಬಂದರೆ ಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಇಂತಹ ವಿಷಯದಲ್ಲಿ ಸರ್ಕಾರಕ್ಕೆ ಡಿಸ್‌ಕ್ರಿಷನರಿ ಪವರ್ಸ್ ಇರುತ್ತದೆ. ರಾಜ್ಯದ ಹಿತದೃಷ್ಟಿಯಿಂದ ಯಾವುದಾದರೂ ಸರ್ಕಾರಿ ನೌಕರರಿಗೆ ಎಕ್ಸ್‌ಟೆನ್‌ಷನ್ ಕೊಡುವುದು ಸೂಕ್ತವೆಂದು ಕಂಡುಬಂದರೆ ಸರ್ಕಾರಕ್ಕಿರುವ ಡಿಸ್‌ಕ್ರಿಷನರಿ ಪವರ್‌ನು

ಉಪಯೋಗಿಸಿಕೊಂಡು ಕೊಡಲಾಗುತ್ತದೆ. ಕೆಲವು ಸಮಯದಲ್ಲಿ ಈ ಡಿಸ್‌ಕ್ರಿಪ್ಷನರಿ ಪವರ್‌ನ್ನು ದುರುಪಯೋಗ ಮಾಡಬಹುದು. ಅಂತಹ ಸಮಯದಲ್ಲಿ ಅದನ್ನು ಕೇಳುವುದಕ್ಕೆ ತಾವು ಇದ್ದೇ ಇದ್ದೀರಿ ಮತ್ತು ಈ ರೀತಿ ಸರ್ಕಾರ ಏನಾದರು ತಪ್ಪು ಮಾಡಿದಾಗ ಅದರ ಬಗ್ಗೆ ಪಬ್ಲಿಕ್ ಒಪೀನಿಯನ್‌ಕೂಡ ಬರುತ್ತದೆ. ಮಾನ್ಯ ಸದಸ್ಯರು ರೇಷ್ಮೆ ಇಲಾಖೆಯ ಒಬ್ಬರು ಅಧಿಕಾರಿಗಳ ಬಗ್ಗೆ ಕೇಳಿದರು. ಅವರಿಗೆ ಎಕ್ಸ್‌ಟೆನ್‌ಷನ್ ಕೊಡುವುದು ಅಗತ್ಯವಿದ್ದರೆ ಮಾಡಬೇಕಾಗಿ ಬರುತ್ತದೆ.

ಶ್ರೀ ಕೆ. ಎಂ. ನಾಗಣ್ಣ.—ಸರ್ಕಾರಕ್ಕಿರುವ ಡಿಸ್‌ಕ್ರಿಪ್ಷನರಿ ಪವರ್‌ನ್ನು ಸರಿಯಾಗಿ ಉಪಯೋಗಿಸಿಕೊಳ್ಳದಿದ್ದಾಗ ಅದನ್ನು ಕೇಳುವುದಕ್ಕೆ ಈ ಸಭೆಯ ಸದಸ್ಯರಿಗೆ ಹಕ್ಕಿದೆ ಅಲ್ಲವೆ ?

ಶ್ರೀ ಡಿ. ದೇವರಾಜ ಅರಸ್.—ಕೇಳುವುದಕ್ಕೆ ಅವಕಾಶ ಇದ್ದೇ ಇದೆ.

ಶ್ರೀ ಬಿ. ಬೈರಪ್ಪಾಜಿ—ನ್ಯಾಯಾಂಗ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ನಿವೃತ್ತಿಗೊಳ್ಳುವ ವಯೋಮಿತಿಯನ್ನು ಎಷ್ಟಕ್ಕೆ ನಿಗದಿ ಮಾಡಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಹೈಕೋರ್ಟಿನ ಜಡ್ಜ್‌ಗಳನ್ನು ಬಿಟ್ಟರೆ ಉಳಿದ ನೌಕರರಿಗೆಲ್ಲಾ ನಿವೃತ್ತಿಗೊಳ್ಳುವ ವಯೋಮಿತಿ 55 ವರ್ಷವಾಗಿದೆ.

ಶ್ರೀ ಬಿ. ಬೈರಪ್ಪಾಜಿ.—ಸರ್ಕಾರೀ ನೌಕರರು ತಮ್ಮ ನಿವೃತ್ತಿಗೊಳ್ಳುವ ವಯೋಮಿತಿಯನ್ನು 58ಕ್ಕೆ ಹೆಚ್ಚಿಸಬೇಕೆಂದು ಕೇಳಿರುವುದು ನಿಜವೇ ?

ಶ್ರೀ ಡಿ. ದೇವರಾಜ ಅರಸ್.—ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ವಿರೂಪಾಕ್ಷ ಎಂ. ಘಾಡಿ—ಸುಮಾರು 1,314 ಮಂದಿ ಶಾನುಭೋಗರನ್ನು ಅವರ ಮೇಲೆ ಅಡ್ವರ್ಸ್ ರಿಮಾರ್ಕ್ಸ್ ಇಲ್ಲದಿದ್ದರೂ ಕೂಡ ನಿವೃತ್ತಿಗೊಳಿಸಲಾಗಿದೆ. ಈ ರೀತಿ ನಿವೃತ್ತಿಗೊಳಿಸುವ ಮುನ್ನ ಸ್ಟೇಟ್ ರೆವರ್‌ನ್ಯೂರೆಟ್ರಂಚ್‌ಮೆಂಟ್ ಸ್ಕ್ರೀನಿಂಗ್ ಕಮಿಟಿಯವರು ಸಹ ಅವರ ಅಭಿಪ್ರಾಯವನ್ನು ಪಡೆದುಕೊಂಡಿಲ್ಲ. ಆದ್ದರಿಂದ ಇವರನ್ನು ಮತ್ತೆ ನೇಮಕ ಮಾಡಿಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರ ಪ್ರಶ್ನೆ ಮೂಲ ಪ್ರಶ್ನೆಗೆ ಸಂಬಂಧಪಟ್ಟಿಲ್ಲ. ಆನುವಂಶೀಯವಾಗಿ ಬಂದಂತಹ ಶಾನುಭೋಗರು ಮತ್ತು ಪಟೇಲರನ್ನು ನಿವೃತ್ತಿಗೊಳಿಸುವ ಬಗ್ಗೆ ಬೇರೆ ಒಂದು ಆಕ್ಟ್ ಇದೆ.

ಶ್ರೀ ವಿರೂಪಾಕ್ಷ ಎಂ. ಘಾಡಿ—ಮುಂಬೈ ಕರ್ನಾಟಕದಲ್ಲಿ ಆ ಆಕ್ಟ್ ಜಾರಿಯಲ್ಲಿ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಅದರ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಂತ್ರಿಗಳಿಗೇನಾದರು ಸರ್ಕಾರೀ ನೌಕರರಿಗೆ ಇರುವಂತೆ ನಿವೃತ್ತಿಯ ವಯೋಮಿತಿ ಇದೆಯೇ ?

ಶ್ರೀ ಡಿ. ದೇವರಾಜ ಅರಸ್.—ಮಂತ್ರಿಗಳ ನಿವೃತ್ತಿ ಒಂದು ಘಳಿಗೆಯಲ್ಲಿ ಆಗಬಹುದು ಅಥವಾ ಅವರು ಸಾಯುವವರೆಗೂ ಅಧಿಕಾರದಲ್ಲಿ ಮುಂದುವರೆಯಬಹುದು. ತಾವು ಅಧಿಕಾರಕ್ಕೆ ಬಂದಹೋಲೆ ಮಂತ್ರಿಗಳವಯೋಮಿತಿಯನ್ನು ಬೇಕಾದರೆ ನಿರ್ಧಾರ ಮಾಡಬಹುದು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ನೌಕರರನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸುವ ಬಗ್ಗೆ ಏನು ಒಂದು ಕಮಿಟಿ ಇದೆ, ಆ ಕಮಿಟಿಯಲ್ಲಿ ಒಂದು ಗೊತ್ತಾದ ಜನಾಂಗದವರು ಇರುವುದರಿಂದ, ಅವರಿಂದ ಈ ಹಿಂದುಳಿದ ಜನಾಂಗದ ನೌಕರರಿಗೆ ಹೆಚ್ಚಿನ ತೊಂದರೆಯಾಗುತ್ತಿರುವುದರಿಂದ, ಅದನ್ನು ತಪ್ಪಿಸಿ ಹಿಂದುಳಿದ ಜನಾಂಗದವರಿಗೆ ಸೂಕ್ತ ರಕ್ಷಣೆಯನ್ನು ಕೊಡಿಸಿ, ಇನ್ನು ಮುಂದೆ ಈ ರೀತಿಯ ಕೈವಾಡ ನಡೆಯದಂತೆ ನೋಡಿಕೊಳ್ಳುತ್ತೀರಾ ? ಮತ್ತು ಆ ಕಮಿಟಿಯಲ್ಲಿ ಹರಿಜನರಿಗೂ ಸೂಕ್ತ ಪ್ರಾತಿನಿಧ್ಯ ಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಯಾರಾದರು ಸರ್ಕಾರೀ ನೌಕರರನ್ನು ನಿವೃತ್ತಿ ಮಾಡುವಾಗ ಅದನ್ನು ಸರ್ಕಾರ ತೀರ್ಮಾನ ಮಾಡುತ್ತದೆಯೇ ಹೊರತು ಅಧಿಕಾರಿಗಳಲ್ಲ. ಅದಕ್ಕಾಗಿ ಇರುವ ಸಮಿತಿಯಲ್ಲಿ ಹರಿಜನರಿಗೆ ಪ್ರಾತಿನಿಧ್ಯ ಕೊಡುವ ಪ್ರಶ್ನೆಯೇ ಏಳುವುದಿಲ್ಲ. ಏಕೆಂದರೆ ಅದು ರೆಕ್ರೂಟ್‌ಮೆಂಟ್ ಬಾಡಿ ಅಲ್ಲ. ನಿವೃತ್ತಿ ಮಾಡುವಾಗ ಅವರು ಯಾವ ಜನಾಂಗದವರೇ ಆಗಲಿ, ಅವರು ಕೆಲಸ ಮಾಡುವುದಕ್ಕೆ ರಾಯಕ್ ಇಲ್ಲ ಎಂದು ತಿಳಿದುಬಂದರೆ ಅಂತಹವರನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸಲಾಗುತ್ತದೆ.